<u>ದಿನಾಂಕಃ **24.06.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ</u> ವಾದಿ ಪರ ವಕೀಲರಿಂದ

ನಾನು ಮೂಲತಃ ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆ, ಗೋರಂಟ್ಲು ಗ್ರಾಮದ ವಾಸಿಯಾಗಿರುತ್ತೇನೆ. 1984 ರಿಂದ ದೊಡ್ಡಬಳ್ಳಾಪುರದ ಸಂಜಯನಗರದಲ್ಲಿ ವಾಸಿಸುತ್ತಿದ್ದೇನೆ. ನಾನು ಪೀಠೋಪಕರಣಗಳ ವ್ಯಾಪಾರವನ್ನು ಮಾಡುತ್ತೇನೆ. ಮೊದಲು ನೇಯ್ಗೆ ಕೆಲಸ ಮಾಡುತ್ತಿದ್ದೆ. ದೊಡ್ಡಬಳ್ಳಾಪುರದ ಜನರ ಪರಿಚಯ ನನಗೆ ಚೆನ್ನಾಗಿ ಇರುತ್ತದೆ. ಸರ್ವೇ ನಂ. 50/1 ಮೂಲತಃ ಬಿ.ಜಿ. ಚಕ್ರಪಾಣಿಯವರ ಕುಟುಂಬಕ್ಕೆ ಸೇರಿದ್ದಾಗಿರುತ್ತದೆ ಎಂದರೆ ಸರಿ. ಬಿ.ಜಿ. ಚಕ್ರಪಾಣಿಯವರು ದಿಃ 10.04.1982 ರಲ್ಲಿ ವಿಭಾಗ ಮಾಡಿಕೊಂಡಿದ್ದು ಸದರಿ ಸರ್ವೇ ನಂ. 50/1 ರಲ್ಲಿ 23 ಗುಂಟೆ ಜಮೀನು ಬಿ.ಜಿ. ಚಕ್ರಪಾಣಿಯವರ ಭಾಗಕ್ಕೆ ಬಂದಿರುತ್ತದೆ. ಸದರಿ 23 ಗುಂಟೆ ಜಾಗವನ್ನು ಅವರು ಸಾಕಷ್ಟು ಜನರಿಗೆ ಮಾರಾಟ ಮಾಡಿದ್ದು, ಅವರ ಹತ್ತಿರ ಪ್ರಸ್ತುತವಾಗಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿ.

ಡಿ.ಎನ್.ಸುಬ್ರಮಣ್ಯ ಎಂಬುವವರು 1996 ರಲ್ಲಿ ಸದರಿ ಜಮೀನಿನಲ್ಲಿ 14 ಗುಂಟೆ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸುಬ್ರಮಣ್ಯರವರು 1996 ರಲ್ಲಿ 14 ಗುಂಟೆ ಜಾಗವನ್ನು ಖರೀದಿಸಿದ ನಂತರ ನಿವೇಶನಗಳನ್ನು ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮುನ್ಸಿಪಾಲಿಟಿಯ ಖಾತಾ ಆಧಾರದ ಮೇಲೆ ಮಾಡಿರುತ್ತಾರೆ ಯಾವುದೇ ರೀತಿಯ ಪೋಡಿ ಅಥವಾ ಸರ್ವೇಯನ್ನು ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2013 ರಲ್ಲಿ ಸಿದ್ದಗಂಗಮ್ಮರವರು ಸದರಿ ಸರ್ವೇ ನಂಬರ್‌ನಲ್ಲಿ 1.54 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಸಿದ್ದಗಂಗಮ್ಮರವರಿಗೆ ಅಲ್ಲಿಯವರೆಗೂ ನನ್ನ ಜಮೀನು ಇರುತ್ತದೆ ಖರೀದಿಸಬೇಡಿ ಎಂದು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ತಕರಾರು ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಸರ್ವೇ ನಂ. 50/1 ಬಿ.ಜಿ. ಚಕ್ರಪಾಣಿಯವರಿಗೆ ಸೇರಿದೆ ಎಂಬ ವಿಷಯವನ್ನು ನಾನು ತಿಳಿಸಿರುವುದಿಲ್ಲ ಎಂದರೆ ಸರಿ.

ದಿಃ 15.07.1999 ರಲ್ಲಿ ಜಾಗವನ್ನು ಖರೀದಿ ಮಾಡಿರುತ್ತೇನೆ. ಸರೋಜಮ್ಮರವರು ಬಿ.ಜಿ. ಚಕ್ರಪಾಣಿಯವರಿಂದ ದಿಃ 14.03.1996 ರಲ್ಲಿ 4 ¼ ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ನಾನು ಖರೀದಿಸುವ ಮೊದಲು ಡಿ.ಎನ್.ಸುಬ್ರಮಣ್ಯರವರು ಬಿ.ಜಿ. ಚಕ್ರಪಾಣಿಯವರಿಂದ 14 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿ. 14 ಗುಂಟೆ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ ತಿಪ್ಪಾಪುರಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ಇದೇ ಸರ್ವೇ ನಂಬರ್‌ನ ಉಳಿಕೆ ಜಮೀನು, ಉತ್ತರಕ್ಕೆ

ವೆಂಟಕರಮಣ ಸ್ವಾ ಮಿ ದೇವಸ್ಥನಾದ ಇನಾಮ್ತಿ ಜಮೀನು ಮತ್ತು ದಕ್ಷಿಣಕ್ಕೆ ಸರ್ವೇ ನಂ. 50/2 ರ ಜಾಗ ಇರುತ್ತದೆ ಎಂದರೆ ಸರಿ. ಸರೋಜಮ್ಮರವರ ಕ್ರಯದ ಚೆಕ್ಕುಬಂಧಿಯನ್ನು ನೋಡಿರುತ್ತೇನೆ. ಸರೋಜಮ್ಮನವರ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ ತಿಪ್ಪಾಪುರಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ನಲ್ಲಪ್ಪರವರಿಗೆ ಇದೇ ಸರ್ವೇ ನಂಬರ್‌ನಲ್ಲಿ ಕ್ರಯವಾಗುವ ಜಮೀನು, ಉತ್ತರಕ್ಕೆ ಡಿ.ಎನ್.ಸುಬ್ರಮಣ್ಯರವರ 14 ಗುಂಟೆ ಜಾಗ, ದಕ್ಷಿಣಕ್ಕೆ ನಾಗರತ್ನಮ್ಮರವರ ಜಮೀನು ಸರ್ವೇ ನಂ. 50/2 ಆಗಿರುತ್ತದೆ ಎಂದರೆ ಸರಿ.

ಸರೋಜಮ್ಮರವರ ಕ್ರಯಪತ್ರದಲ್ಲಿ ಕೇವಲ 4 ¼ ಗುಂಟೆಯನ್ನು ತೋರಿಸಿದ್ದು, ಯಾವುದೇ ನಿಖರವಾದ ಅಳತೆ ಇರುವುದಿಲ್ಲ ಎಂದರೆ ಸರಿ. ಸರೋಜಮ್ಮನವರಿಂದ ನಾನು ಖರೀದಿಸಿದ ಕ್ರಯಪತ್ರದಲ್ಲಿನ ಶೆಡ್ಯೂಲ್‌ನ ಪ್ರಕಾರ ಚೆಕ್ಕುಬಂಧಿ ಪೂರ್ವಕ್ಕೆ ತಿಪ್ಪಾಪುರಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ನಲ್ಲಪ್ಪರವರು, ಉತ್ತರಕ್ಕೆ ಡಿ.ಎನ್.ಸುಬ್ರಮಣಿರವರು, ದಕ್ಷಿಣಕ್ಕೆ ನಾಗರತ್ನಮ್ಮರವರ ಸರ್ವೇ ನಂ. 50/2 ರ ಜಮೀನು ಇರುತ್ತದೆ ಎಂದರೆ ಸರಿ. ನನಗೆ ಮಾರಾಟ ಮಾಡಿದ ಜಮೀನಿನ ಕ್ರಯಪತ್ರದ ಶೆಡ್ಯೂಲ್‌ನಲ್ಲಿ ಜಮೀನಿನ ವಿಸ್ತೀರ್ಣ 93 X 50 ಎಂದು ನನಗೆ ಕ್ರಯಕ್ಕೆ ನೀಡಿದವರೇ ಅಳತೆ ಮಾಡಿ ಬರೆದಿರುತ್ತಾರೆ. ಸದರಿ ಅಳತೆಯನ್ನು ಮಾಡುವ ಸಮಯದಲ್ಲಿ ಅಕ್ಕ ಪಕ್ಕದ ಜಮೀನಿನವರನ್ನು ಕರೆಯದೇ ಅಳತೆ ಮಾಡಿರುತ್ತೇವೆಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಆ ದಾಖಲೆಯಲ್ಲಿ ಪೂರ್ವ ಪಶ್ಚಿಮಕ್ಕೆ ಇರುವ ಒಂದು ಮನೆಯು ನಾರಾಯಣಪ್ಪನವರದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ನನ್ನ ಜಮೀನಿನ 93 ಅಡಿ ಜಾಗವು ಅಲ್ಲಿರುವ ರಸ್ತೆಯಿಂದ ವಿದ್ಯುತ್ ಕಂಬದವರೆಗೂ ಇರುತ್ತದೆ.

ಸದರಿ ನಿಪಿ-13 ನ್ನು ಸಾಕ್ಷಿಯು ನೋಡಿದ್ದು, ಅದರಲ್ಲಿ ನಲ್ಲಪ್ಪರವರ ಖಾಲಿ 2 ಗುಂಟೆ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-13 ರಲ್ಲಿರುವ ಎರಡೂ ಮನೆಗಳು 14 ಗುಂಟೆ ಜಾಗದಲ್ಲಿ ನಿರ್ಮಿಸಲಾಗಿರುತ್ತದೆ ಎಂದರೆ ಸರಿ. ನಿಪಿ-13 ರಲ್ಲಿ ಪಾಯ ಹಾಕಿರುವ ಜಾಗ ತಿಪ್ಪರಾಜು ಹಾಗೂ ನಂದಿನಿಯವರ ಜಮೀನಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಡಿ.ಎನ್.ಸುಬ್ರಮಣಿಯವರು ಕಲ್ಲುಕೂಚುಗಳನ್ನು ಅವರ 14 ಗುಂಟೆ ಜಮೀನಿನಲ್ಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅವರು ಸರ್ವೇಯನ್ನು ಮಾಡಿಸದೇ ಹಾಕಿಕೊಂಡಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಕಲ್ಲುಕೂಚುಗಳ ಒಳಗಡೆಯೇ ತಿಪ್ಪರಾಜು ಮತ್ತು ನಂದಿನಿಯವರು ಪಾಯವನ್ನು ಹಾಕಿರುತ್ತಾರೆ ಎಂದರೆ ಸರಿ.

ನನ್ನ ಕ್ರಯ ಪತ್ರದಲ್ಲಿ ನಮೂದಾಗಿರುವ 93 X 50 ಎಂಬ ಅಳತೆಯು ಯಾವುದೇ ಆಧಾರವಿಲ್ಲದೇ ಬರೆದದ್ದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಾನು ಖರೀದಿ ಮಾಡಿರುವ ಜಾಗಕ್ಕೆ ಸರ್ವೇಯ ನಂಬರ್‌ನ್ನು ಪೋಡಿ ಮಾಡಿಸಿದ್ದು ಯಾವಾಗ ಎಂದು ನೆನಪಿಲ್ಲ. ಪೋಡಿ ಮಾಡಿಸುವ ಸಮಯದಲ್ಲಿ ಪೋಡಿ ಸರ್ವೇಯನ್ನು ಮಾಡಿಸಿರುತ್ತೇನೆ. ಸದರಿ ಸಮಯದಲ್ಲಿ ಅಕ್ಕಪಕ್ಕದ ಜಮೀನಿನವರಿಗೆ ನೋಟೀಸ್‌ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೋಟೀಸ್‌ನ್ನು ಜಮೀನಿನ ಮೂಲ ಮಾಲೀಕರಿಗೆ ನೀಡಿರುತ್ತೇನೆ. ಪೋಡಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಅವರು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಇದರಲ್ಲಿ ಸರ್ವೇ ಸ್ಕೆಚ್ ಹಾಗೂ ನೋಟೀಸ್ ಹಾಜರುಪಡಿಸಿದ್ದರೆ ತೋರಿಸಿ ಎಂದು ಕೇಳಲಾಗಿ ಸಾಕ್ಷಿಯು ದಾಖಲೆಗಳನ್ನು ನೋಡಲಾಗಿ ಆ ರೀತಿಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ-13 ಮತ್ತು 14ಕ್ಕೆ ಸಂಬಂಧಿಸಿದ ಒಂದು ಸಿ.ಡಿ.ಯನ್ನು ಹಾಜರುಪಡಿಸಿದ್ದು ಸದರಿ ಸಿ.ಡಿ-15 ಎಂದು ಗುರುತಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು</u>ಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**